ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಯರಗೇರಾ–584133, ರಾಯಚೂರು, ಕರ್ನಾಟಕ ರಾಜ್ಯ, ಭಾರತ

Office No.+91 9141030953 ಪರೀಕ್ಷಾ ವಿಭಾಗ E-mail: registrarevrur@gmail.com

ಸಂಖ್ಯೆ: ರಾವಿರಾ/ಪರೀಕ್ಷಾ/2024–25/383 ದಿನಾಂಕ: 10.07.2024

## ಸುತ್ತೋಲೆ

ರಾಯಚೂರು ವಿಶ್ವವಿದ್ಯಾಲಯದ ಮುಖ್ಯ ಆವರಣ ಹಾಗೂ ವಿಶ್ವವಿದ್ಯಾಲಯ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಹಾಗೂ ಖಾಸಗಿ ಪದವಿ ಮಹಾವಿದ್ಯಾಲಯಗಳ ಕನ್ನಡ ಸ್ನಾತಕೋತ್ತರ ಪದವಿಯ 2023–24ನೇ ಶೈಕ್ಷಣಿಕ ಸಾಲಿನ ನಾಲ್ಕನೇ ಸೆಮಿಸ್ಟರ್‌ನ ಎಚ್.ಸಿ.೪.೩–ಕನ್ನಡ ಸಂಶೋಧನ ಅಧ್ಯಯನ ಮತ್ತು ಪ್ರಬಂಧ ರಚನೆ ಪತ್ರಿಕೆಗೆ ಸಂಬಂಧಿಸಿದಂತೆ **'ಸಾಹಿತ್ಯ, ಸಂಸ್ಕೃತಿ, ಶಾಸನ, ಜಾನಪದ ಸಾಹಿತ್ಯ, ಗ್ರಾಮ ಚರಿತ್ರೆ'** ವಿಷಯದ ಕುರಿತಾಗಿ ಕಿರು ಸಂಶೋಧನ ಪ್ರಬಂಧವನ್ನು ಸಿದ್ಧಪಡಿಸಲು ಸೂಚಿಸಲಾಗಿದೆ.

**ವಿಶೇಷ ಸೂಚನೆಗಳು:**

೧. ಕಿರು ಸಂಶೋಧನ ಪ್ರಬಂಧದ ವಿಷಯವು ಈ ಮುಂಚೆ ಎಲ್ಲಿಯೂ ಪ್ರಕಟಗೊಂಡಿರಬಾರದು.

೨. ಕಿರು ಸಂಶೋಧನ ಪ್ರಬಂಧಕ್ಕೆ ಆಯ್ಕೆ ಮಾಡಿಕೊಳ್ಳುವ ವಿಷಯ ಕಡ್ಡಾಯವಾಗಿ ಕ್ಷೇತ್ರಕಾರ್ಯ (Field Work) ಆಧಾರಿತ ಅಧ್ಯಯನ ಒಳಗೊಂಡಿರಬೇಕು. ಅದಕ್ಕೆ ಸಂಬಂಧಿಸಿದ ಛಾಯಾಚಿತ್ರಗಳನ್ನು ಪ್ರಬಂಧದ ಕೊನೆಗೆ ಹಾಕುವುದು ಕಡ್ಡಾಯವಾಗಿದೆ.

೩. ವ್ಯಕ್ತಿ ಅಧ್ಯಯನ, ಸಾಹಿತ್ಯಿಕ ಸಾಧನೆ ವಿಷಯದ ಬಗ್ಗೆ ಕಿರು ಪ್ರಬಂಧ ರಚನೆಗೆ ಅವಕಾಶವಿರುವುದಿಲ್ಲ.

೪. ಕಿರು ಸಂಶೋಧನ ಪ್ರಬಂಧ ರಚನೆ ವಿದ್ಯಾರ್ಥಿಗಳ ಹೆಸರು ಮತ್ತು ಅವರು ಆಯ್ಕೆ ವಿಷಯದ ಪಟ್ಟಿಯನ್ನು ಆಯಾ ವಿಭಾಗಳ ಮುಖ್ಯಸ್ಥರು/ಪ್ರಾಚಾರ್ಯರು ದಿನಾಂಕ–25.07.2024ರ ಒಳಗೆ ಕುಲಸಚಿವರು ಮೌಲ್ಯಮಾಪನ ವಿಭಾಗಕ್ಕೆ ಸಲ್ಲಿಸಲು ಸೂಚಿಸಲಾಗಿದೆ.

೫. ಕಿರು ಸಂಶೋಧನ ಪ್ರಬಂಧವು ೮೦ ಪುಟಗಳಿಗಿಂತ ಅಧಿಕವಾಗಿರಬೇಕು.

೬. ಸಂಶೋಧನ ಪ್ರಬಂಧವು ಕಡ್ಡಾಯವಾಗಿ ಅಡಿಟಿಪ್ಪಣಿ, ಆಧಾರಗ್ರಂಥ ಹಾಗೂ ಛಾಯಾಚಿತ್ರಗಳನ್ನು ಹೊಂದಿರಬೇಕು.

೭. ಎಚ್.ಸಿ.೪.೩–'ಕನ್ನಡ ಸಂಶೋಧನ ಅಧ್ಯಯನ ಮತ್ತು ಪ್ರಬಂಧ ರಚನೆ' ಪತ್ರಿಕೆಯು ಪ್ರಬಂಧ ರಚನೆಗೆ 60 ಅಂಕಗಳು, ಮೌಖಿಕ ಪರೀಕ್ಷೆಗೆ ೨೦ ಅಂಕಗಳು ಹಾಗೂ ಆಂತರಿಕ ಕಿರುಪರೀಕ್ಷೆಗೆ 20 ಅಂಕಗಳು ಒಳಗೊಂಡಿರುತ್ತದೆ.

೮. ಮೌಖಿಕ ಸಂದರ್ಶನಕ್ಕೂ ಮುಂಚಿತವಾಗಿ ಸಂಶೋಧನ ಪ್ರಬಂಧದ ಎರಡು ಪ್ರತಿಗಳನ್ನು 2023–24ನೇ ಶೈಕ್ಷಣಿಕ ಸಾಲಿನ ತರಗತಿಗಳು 30.08.2024ರಂದು ಮುಕ್ತಾಯವಾಗುವ ಮುಂಚಿತವಾಗಿ ಕುಲಸಚಿವರು ಮೌಲ್ಯಮಾಪನ ವಿಭಾಗಕ್ಕೆ ಸಲ್ಲಿಸಲು ಸೂಚಿಸಲಾಗಿದೆ.

**ಕುಲಸಚಿವರು**(ಮೌಲ್ಯಮಾಪನ)
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

ಪ್ರತಿಗಳು:

1. ರಾಯಚೂರು ವಿಶ್ವವಿದ್ಯಾಲಯ ವ್ಯಾಪ್ತಿಯ ಸಂಲಗ್ನತೆ ಹೊಂದಿದ ಎಲ್ಲಾ ಸ್ನಾತಕೋತ್ತರ ಪದವಿ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ, ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಕಛೇರಿ ಪ್ರತಿ.